ಶ್ರೀ ಪರ್ತಗಾಳಿ ಜೀವೋತ್ತಮ ಕೇಂದ್ರ ಮಠದಲ್ಲಿ ಶ್ರೀ ಸ್ವಾಮೀಜಿಯವರ 10ನೇ ಚಾತುರ್ಮಾಸ್ಯ ವ್ರತ ಆರಂಭ

ದೇವರಿಗೆ ಸಂಪತ್ತಿಗಿಂತ ಶುದ್ಧ ಭಕ್ತಿ ಮುಖ್ಯ

ಸಂ.ಕ. ಸಮಾಚಾರ ಹುಬ್ಬಳ್ಳಿ

ಗೋಮಾಂತಕದ ಪವಿತ್ರ ಕುಶಾವತಿ ನದಿಯ ತಟದಲ್ಲಿ, ಪ್ರಕೃತಿ ಸೊಬಗಿನ ಪರ್ವತ–ಕಾನನಗಳ ಮಧ್ಯೆ ನೆಲೆಸಿರುವ ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಕೇಂದ್ರ ಮಠದಲ್ಲಿ ಪರಾಭವ ನಾಮ ಸಂವತ್ಸರದ ಚಾತುರ್ಮಾಸ್ಯ–2026 ಅತ್ಯಂತ ವೈಭವ, ಭಕ್ತಿಭಾವ ಹಾಗೂ ಧಾರ್ಮಿಕ ಸಂಭ್ರಮದೊಂದಿಗೆ ಆರಂಭಗೊಂಡಿದೆ.

ಶ್ರೀ ಮಠದ 24ನೇ ಮಠಾಧೀಶರಾದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ್ ಸ್ವಾಮೀಜಿಯವರು ಬುಧವಾರ ಪವಿತ್ರ ಚಾತುರ್ಮಾಸ್ಯ ವ್ರತವನ್ನು ವಿಧಿವತ್ತಾಗಿ ಸ್ವೀಕರಿಸಿದರು. ಬೆಳಿಗ್ಗೆಯಿಂದ ಸಂಜೆಯವರೆಗೆ ಗಣಪತಿ ಪೂಜೆ, ಮೃತ್ತಿಕಾ ಪೂಜೆ, ವ್ಯಾಸ ಪೂಜೆ, ಸಂಕಲ್ಪ, ಚಾತುರ್ಮಾಸ್ಯ ವ್ರತ ಸ್ವೀಕಾರ ಸೇರಿದಂತೆ ವಿವಿಧ ವೈದಿಕ ಧಾರ್ಮಿಕ ವಿಧಿವಿಧಾನಗಳು ನೆರವೇರಿತು.

ಆಶೀರ್ವಚನ ನೀಡಿದ ಶ್ರೀಗಳು, ದೇವರನ್ನು ಒಲಿಸಿಕೊಳ್ಳಲು ಸಂಪತ್ತಿಗಿಂತ ಶುದ್ಧ ಭಕ್ತಿ ಮುಖ್ಯವೆಂದರು. ಕಾರ್ಯಕ್ರಮದಲ್ಲಿ ಜೀವೋತ್ತಮ ವಿದ್ಯಾಪೀಠದ ವಿದ್ಯಾರ್ಥಿಗಳು, ವೈದಿಕರು, ಕರ್ನಾಟಕ, ಗೋವಾ, ಕೇರಳ ಹಾಗೂ ಮಹಾರಾಷ್ಟ್ರದ ವಿವಿಧ ದೇವಾಲಯಗಳ ಆಡಳಿತ ಮಂಡಳಿಯ ಸದಸ್ಯರು, ಪರ್ತಗಾಳಿ ಚಾತುರ್ಮಾಸ್ಯ ಸಮಿತಿಯ ಅಧ್ಯಕ್ಷ ಅನಿಲ್ ಪೈ ಹಾಗೂ ಸದಸ್ಯರು, ಮಾಜಿ ಉಪಮುಖ್ಯಮಂತ್ರಿ ದಿಗಂಬರ್ ಕಾಮತ್, ಶ್ರೀ ಗೋಕರ್ಣ ಮಠ ಸೆಂಟ್ರಲ್ ಕಮಿಟಿಯ ಅಧ್ಯಕ್ಷ ಶ್ರೀನಿವಾಸ್ ದೆಂಪೊ, ಉಪಾಧ್ಯಕ್ಷ ಆರ್.ಆರ್. ಕಾಮತ್, ವಿವಿಧ ಸಮಿತಿಗಳ ಸದಸ್ಯರು, ಸಮಾಜದ ಗಣ್ಯರು ಹಾಗೂ ದೇಶ–ವಿದೇಶಗಳಿಂದ ಆಗಮಿಸಿದ್ದ ಸಹಸ್ರಾರು ಶಿಷ್ಯವೃಂದ ಮತ್ತು ಭಕ್ತರಿದ್ದರು.

ಶ್ರೀ ಪರ್ತಗಾಳಿ ಜೀವೋತ್ತಮ ಕೇಂದ್ರ ಮಠದಲ್ಲಿ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ್ ಸ್ವಾಮೀಜಿ ಚಾತುರ್ಮಾಸ್ಯ ಆರಂಭದ ದಿನವಾದ ಬುಧವಾರ ಪ್ರವಚನ ನೀಡಿದರು. ಶ್ರೀ ಪರ್ತಗಾಳಿ ಜೀವೋತ್ತಮ ಕೇಂದ್ರಮಠದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿಯವರು. (ಬಲಚಿತ್ರ)

ಸೆಪ್ಟೆಂಬರ್ 26ರವರೆಗೆ ಚಾತುರ್ಮಾಸ್ಯ

ಆಗಸ್ಟ್ 5 ರಿಂದ ಸೆಪ್ಟೆಂಬರ್ 26ರವರೆಗೆ ನಡೆಯಲಿರುವ ಚಾತುರ್ಮಾಸ್ಯದ ಅವಧಿಯಲ್ಲಿ ಪ್ರತಿದಿನ ತ್ರಿಕಾಲ ಪೂಜೆ, ವೇದಪಾರಾಯಣ, ಧಾರ್ಮಿಕ ಪ್ರವಚನಗಳು, ಗುರುಭಿಕ್ಷೆ, ಭಜನೆ, ವಿವಿಧ ಸೇವೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಹತ್ತನೇ ವರ್ಷದ ಚಾತುರ್ಮಾಸ್ಯವನ್ನು ಕೇಂದ್ರ ಮಠದಲ್ಲೇ ಆಚರಿಸುತ್ತಿರುವುದರಿಂದ ಗೋವಾ, ಕರ್ನಾಟಕ, ಕೇರಳ ಮಹಾರಾಷ್ಟ್ರ ಸೇರಿದಂತೆ ದೇಶದ ವಿವಿಧ ಭಾಗಗಳ ಸಮಾಜ ಬಾಂಧವರಿಗೆ ಶ್ರೀಗುರುಗಳ ಸೇವೆ ಸಲ್ಲಿಸುವ ಅಪೂರ್ವ ಸೌಭಾಗ್ಯ ದೊರೆತಿದೆ.

ಕಾರ್ಯಕ್ರಮಗಳು

ಪ್ರತಿಯೊಂದು ಏಕಾದಶಿ ಯಂದು ಶ್ರೀಗುರುಗಳವರಿಂದ ತಪ್ತಮುದ್ರಾ ಧಾರಣೆಯೂ ನೆರವೇರಲಿದೆ. ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರ, ನೇತ್ರ ತಪಾಸಣಾ ಶಿಬಿರ ಸೇರಿದಂತೆ ವಿವಿಧ ಸಾಮಾಜಿಕ ಸೇವಾ ಕಾರ್ಯಕ್ರಮಗಳು ಹಾಗೂ ದೇಶದ ಪ್ರಸಿದ್ಧ ಭಜನಾ ಮಂಡಳಿಗಳು ಮತ್ತು ಗಾಯಕರಿಂದ ಭಜನಾ ಸೇವೆಯೂ ಆಯೋಜಿಸಲಾಗಿದೆ.

ಐತಿಹಾಸಿಕ ವಿಶೇಷತೆ

ಈ ವರ್ಷದ ಚಾತುರ್ಮಾಸ್ಯವು ಹಲವು ಐತಿಹಾಸಿಕ ವಿಶೇಷತೆಗಳನ್ನು ಒಳಗೊಂಡಿದೆ. ಇದು ಪರಮಪೂಜ್ಯ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ್ ಸ್ವಾಮೀಜಿಯವರ ಹತ್ತನೇ ಚಾತುರ್ಮಾಸ್ಯ ವ್ರತವಾಗಿದ್ದು, ಪರ್ತಗಾಳಿ ಕೇಂದ್ರ ಮಠದಲ್ಲಿ ನಡೆಯುತ್ತಿರುವ ನಾಲ್ಕನೇ ಚಾತುರ್ಮಾಸ್ಯವಾಗಿದೆ. ಇದಕ್ಕೂ ಮುನ್ನ ಹುಬ್ಬಳ್ಳಿ, ಬದರಿನಾಥ, ಕುಮಟಾ, ಪನ್ವೆಲ್, ಬೆಂಗಳೂರು, ವಾರಣಾಸಿ ಹಾಗೂ ಮೂರು ಬಾರಿ ಪರ್ತಗಾಳಿಯಲ್ಲಿ ಚಾತುರ್ಮಾಸ್ಯ ಆಚರಿಸಿರುವ ಶ್ರೀ ಸ್ವಾಮೀಜಿಯವರು ಈ ಬಾರಿ ತಮ್ಮ ಹತ್ತನೇ ಚಾತುರ್ಮಾಸ್ಯವನ್ನು ಪುನಃ ಕೇಂದ್ರ ಮಠದಲ್ಲೇ ಆಚರಿಸುತ್ತಿದ್ದಾರೆ. ಅಲ್ಲದೇ, ಕಳೆದ ವರ್ಷ ವೈಭವದಿಂದ ನಡೆದ ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ 550ನೇ ವರ್ಷದ ಮಹೋತ್ಸವದ ಬಳಿಕ ನಡೆಯುತ್ತಿರುವ ಮೊದಲ ಚಾತುರ್ಮಾಸ್ಯ ಎಂಬ ಐತಿಹಾಸಿಕ ಮಹತ್ವವೂ ಇದಕ್ಕಿದೆ.

ವೇದ ವೆಲ್ನೆಸ್ ಸೆಂಟರ್, ನಿಸರ್ಗ ಮನೆ
ಶಿರಸಿ
Nisarga Mane
ಖ್ಯಾತ ಪತ್ರಿಕಾ ಅಂಕಣಕಾರರಾದ
ಡಾ. ವೆಂಕಟರಮಣ ಹೆಗಡೆರವರು ಮುಖತಃ
ಭೇಟಿಗೆ ಧಾರವಾಡದಲ್ಲಿ ಲಭ್ಯ!

ದಿನಾಂಕ : ಆಗಸ್ಟ್ 8 & 9 ರಂದು
ಶನಿವಾರ - 10 AM TO 5 PM
ಭಾನುವಾರ - 10 AM TO 5 PM
ಸ್ಥಳ : ಕರ್ನಾಟಕ ವಿದ್ಯಾವರ್ಧಕ ಸಂಘ, ಮಹಾನಗರ ಪಾಲಿಕೆ ಎದುರುಗಡೆ, ಧಾರವಾಡ
ಸಂದರ್ಶನ ಉಚಿತ
ನೋಂದಣಿಗೆ ಇಂದೇ ಕರೆ ಮಾಡಿ
9632867180, 9353981093

28ರಂದು ವರಮಹಾಲಕ್ಷ್ಮೀ ಹಬ್ಬ

ಶಿರಸಿ: ಪರಾಭವ ಸಂವತ್ಸರದ ಕೆಲವು ಪಂಚಾಂಗಗಳಲ್ಲಿ ಶ್ರಾವಣ ಮಾಸದ ಎರಡನೇ ಶುಕ್ರವಾರವಾದ ಆ. 21 ರಂದು ವರಮಹಾಲಕ್ಷ್ಮೀ ವ್ರತ ಎಂದು ಉಲ್ಲೇಖಿಸಿರುವ ಹಿನ್ನೆಲೆಯಲ್ಲಿ, ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನವು ಈ ಕುರಿತು ಸ್ಪಷ್ಟನೆ ನೀಡಿದೆ. ಜು. 30 ರಂದು ಶ್ರೀಮಠದಲ್ಲಿ ನಡೆದ ವೈದಿಕ ಸಮಾವೇಶದಲ್ಲಿ ಧರ್ಮಶಾಸ್ತ್ರಗಳ ಆಧಾರದ ಮೇಲೆ ವಿಚಾರವಿಮರ್ಶೆ ನಡೆಸಿ, ಆ. 28 ರ ಪೌರ್ಣಿಮೆಯ ಶುಕ್ರವಾರದಂದೇ ವರಮಹಾಲಕ್ಷ್ಮೀ ವ್ರತ ಆಚರಿಸಬೇಕು ಎಂದು ನಿರ್ಣಯಿಸಲಾಗಿದೆ ಎಂದು ಶ್ರೀಮಠ ತಿಳಿಸಿದೆ. ಧರ್ಮಶಾಸ್ತ್ರ ಹಾಗೂ ಕೌಮುದಿ ಗ್ರಂಥಗಳಲ್ಲಿ, ಶ್ರಾವಣ ಮಾಸದ ಪೌರ್ಣಿಮೆಯೇ ಶುಕ್ರವಾರ ಬಂದಲ್ಲಿ ಅದೇ ದಿನ ವರಮಹಾಲಕ್ಷ್ಮೀ ವ್ರತವನ್ನು ಆಚರಿಸಬೇಕು, ಅದಕ್ಕೂ ಮುಂಚಿನ ಶುಕ್ರವಾರವಲ್ಲ ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. 'ಯಸ್ಮಿನ್ ವೈ ಶ್ರಾವಣೇ ಮಾಸಿ ಶುಕ್ಲಾಂತೇ ತು ಭೃಗೋರ್ದಿನೇ । ಪ್ರಾರಭ್ಯ ತದ್ವ್ರತಂ ತತ್ರ ವರಲಕ್ಷ್ಮ್ಯಾ ಯತಾತ್ಮಭಿಃ' ಎಂದು ವಿವರಿಸಲಾಗಿದೆ.

23ರಂದು ಸಾಮಾನ್ಯ ಸಭೆ

ಧಾರವಾಡ: ಇಲ್ಲಿಯ ಸಿಬಿಟಿ ಬಳಿಯ ರೀಗಲ್ ಕಾಂಪ್ಲೆಕ್ಸ್‌ನಲ್ಲಿರುವ ಅಥರ್ವ ಸೌಹಾರ್ದ ಸಹಕಾರಿ ನಿಗಮಿತ ಮೊದಲ ವರ್ಷದ ವಾರ್ಷಿಕ ಮಹಾಸಭೆ ಆ. 23ರ ಮುಂಜಾನೆ 10.30ಕ್ಕೆ ರಂಗಾಯಣ ಸಾಂಸ್ಕೃತಿಕ ಸಮುಚ್ಚಯದಲ್ಲಿ ಹಮ್ಮಿಕೊಂಡಿದೆ. ಸಂಘದ ಸದಸ್ಯರು ಸಭೆಗೆ ಭಾಗವಹಿಸಬೇಕು ಎಂದು ಸಂಘದ ಅಧ್ಯಕ್ಷ ಮಂಜುನಾಥ ಹಿರೇಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಯುಕ್ತ ಕರ್ನಾಟಕ
ವಿದ್ಯಾರ್ಥಿ ಸಂಚಿಕೆ
ಕೇವಲ 1 ರೂ.ಗೆ
ಮಾಹಿತಿಗಳ ರಸದೌತಣ
ಜಾಣರ ಗುರು
ರಾಜ್ಯದ ಯಾವುದೇ ಭಾಗದಲ್ಲಿ ಪ್ರತಿಗಳು ಬೇಕಿದ್ದರೆ ಸಂಪರ್ಕಿಸಿ
ಶಾಮರಾವ ಕುಲಕರ್ಣಿ
76250 66319
ಹದಿಹರೆಯದವರಿಗೆ ಅರಿವಿನ ಹರಿವು
ಮನೋಜ/ಪರಶುರಾಮ
9980355366/7349292991

ಸಾರ್ವಜನಿಕ ನೋಟಿಸು

ನಮ್ಮ ಪಕ್ಷಗಾರರಾದ ಶ್ರೀ ಮಾಂತೇಶಗೌಡ ತಂದೆ ಗುರನಗೌಡ ಪಾಟೀಲ, ಸಾ: ಐಮ್ಮಾಪೂರ ಓಣಿ, ಹುಬ್ಬಳ್ಳಿ ತಾ: ಹುಬ್ಬಳ್ಳಿ, ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ನಾನು ಕೊಡುವ ಸಾರ್ವಜನಿಕ ಎಚ್ಚರಿಕೆ ನೋಟೀಸು ಏನೆಂದರೆ,

ಧಾರವಾಡ ಜಿಲ್ಲಾ ಕುಂದಗೋಳ ತಾಲೂಕ ವಿಠಲಾಪೂರ ಗ್ರಾಮದ ಹದ್ದಿನಲ್ಲಿರುವ ಜಮೀನು ಇದರ ಸರ್ವೆ ನಂಬರ.7 ಹಿಸ್ಸಾ ನಂ. 5, ಕ್ಷೇತ್ರ 00 ಎಕರೆ 36 ಗುಂಟೆ ಆಕಾರ ರೂ.2.78 ಪೈಸೆ ಜಮೀನು ಇರುತ್ತದೆ. ಸದರಿ ಜಮೀನಿನ ಮಾಲೀಕರಾದ ಶ್ರೀಮತಿ ಮಧುಮತಿ ಕೋಂ. ಮಂಜುನಾಥ ಹರಕುಣಿ, ಸಾ : ವಿಠಲಾಪೂರ ತಾ: ಕುಂದಗೋಳ, ಇವರಿಂದ ನಮ್ಮ ಪಕ್ಷಗಾರರು ಸದರಿ ಮೇಲ್ಕಂಡ ಜಮೀನಿನ ನೋಂದಾಯಿತ ಖರೀದಿ ಪತ್ರವನ್ನು ಮಾಡಿಕೊಳ್ಳುವವರು ಇರುತ್ತಾರೆ.

ಕಾರಣ, ಮೇಲ್ಕಂಡ ಜಮೀನಿಗೆ ಸಂಬಂಧಿಸಿದಂತೆ ಯಾರದಾದರೂ ಹಕ್ಕು ಹಿತಾಸಕ್ತಿ, ವ ತಂಟೆ–ತಕರಾರು, ವಗೈರೆ ವಿನಾದರೂ ಇದ್ದರೆ ಈ ನೋಟೀಸು ಪ್ರಕಟವಾದ 7 ದಿನಗಳೊಳಗಾಗಿ ಲಿಖಿತ ರೂಪದಲ್ಲಿ ದಾಖಲೆ ಸಮೇತ ತಕರಾರುಗಳನ್ನು ನಮಗಾಗಲೀ ಅಥವಾ ನಮ್ಮ ಪಕ್ಷಗಾರರಾದ ಶ್ರೀ ಮಾಂತೇಶಗೌಡ ತಂದೆ ಗುರನ–ಗೌಡ ಪಾಟೀಲ, ಸಾ: ಐಮ್ಮಾಪೂರ ಓಣಿ, ಹುಬ್ಬಳ್ಳಿ ತಾ: ಹುಬ್ಬಳ್ಳಿ ಇವರಿಗಾಗಲೀ ಸಲ್ಲಿಸಕ್ಕದ್ದು, ನಂತರ ಬಂದ ತಕರಾರುಗಳು, ನಮ್ಮ ಪಕ್ಷಗಾರರ ಮೇಲೆ ಬಾಂಧಾಯಿಸುವುದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ಎಚ್ಚರಿಕೆ ನೋಟೀಸು.

ಎಮ್.ಜಿ. ಪಾಟೀಲ, ವಕೀಲರು
ಹುಬ್ಬಳ್ಳಿ 06–08–2026 ಸೋಸ್ಯ : ವರೂರ, ತಾ॥ ಹುಬ್ಬಳ್ಳಿ. ಮೊ: 8884618258

ಸಾರ್ವಜನಿಕ ನೋಟಿಸು

ನನ್ನ ಪಕ್ಷಗಾರರಾದ ಮಲ್ಲಿಕಜಾನ ತಂದೆ ಇಮಾಮಸಾಬ ಯಲಿಗಾರ ಸಾ॥ ಅಮರಗೋಳ, ಹುಬ್ಬಳ್ಳಿ ಇವರು ಕೊಟ್ಟ ಮಾಹಿತಿ ಮತ್ತು ಅಧಿಕಾರದ ಮೇಲಿಂದ ಕೊಡುವ ಸಾರ್ವಜನಿಕ ನೋಟಿಸು ಏನೆಂದರೆ,

ನಮ್ಮ ಪಕ್ಷಗಾರರು ಧಾರವಾಡ ಜಿಲ್ಲಾ ಕಲಘಟಗಿ ತಾಲೂಕ ಸರ್–ರಜಿಸ್ಟಾರ ಹದ್ದಿಯ ಪೈಕಿ ಬೋಗೇ ನಾಗರಕೊಪ್ಪ ಗ್ರಾಮದ ಸರ್ವೆ ನಂ : 25/1ಬ ಕ್ಷೇತ್ರ 08ಎಕರೆ: 00ಗುಂಟೆ ಜಮೀನನ್ನು ಅದರ ಮಾಲಿಕರಾದ ಶ್ರೀ ಅಕೋಕ ತಂದೆ ಪಂಡರಿನಾಥ ಬೆಳವಕರ, ಸಾ॥ ಬ್ಯಾಂಕರ ಕಾಲನಿ, ಮರಡೇಶ್ವರ ನಿಲಾಮಿಕ್ ಫ್ಯಾಕ್ಟರಿ ಎದುರಿಗೆ, ಹಳೇಹುಬ್ಬಳ್ಳಿ, ಹುಬ್ಬಳ್ಳಿ ಇವರಿಂದ ಖರೀದಿಸುವವರು ಇರುತ್ತಾರೆ.

ಕಾರಣ ಸದರೀ ಆಸ್ತಿಯ ಮೇಲೆ ಮತ್ತು ಖರೀದಿ ವ್ಯವಹಾರದ ಕುರಿತು ಸಾರ್ವಜನಿಕರದು ಯಾರದಾದರೂ ತಂಟೆ, ತಕರಾರು, ಹಕ್ಕು, ಹಿತಾಸಕ್ತಿ, ಮಾಲ್ಕಿ ಭೋಜಾ ಒಟ್ಟುಮೊಕ್ತಿಯಾರ ಪತ್ರ ವಗೈರೆಗಳೇನಾದರೂ ಇದ್ದಲ್ಲಿ ಈ ನೋಟಿಸು ಪ್ರಕಟವಾದ 7 (ಏಳು) ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ದಾಖಲೆ ಸಮೇತ ಲೇಖಿ ಮುಖಾಂತರ ತಿಳಿಸತಕ್ಕದ್ದು ಒಂದು ವೇಳೆ ನಿಗಧಿತ ಅವಧಿಯ ಒಳಗಾಗಿ ಯಾವುದೇ ತಕರಾರು ಬಾರದೇ ಇದ್ದಲ್ಲಿ ಸದರಿ ಆಸ್ತಿಯ ತಕರಾರು ರಹಿತ ಅಂತಾ ಗ್ರಹಿಸಿ ಸದರ ಆಸ್ತಿಯನ್ನು ನನ್ನ ಪಕ್ಷಗಾರರು ಖರೀದಿ ದಸ್ತ ನೊಂದಣಿ ಮಾಡಿಕೊಳ್ಳುತ್ತಾರೆ. ನಂತರ ಬಂದ ತಕರಾರುಗಳು ನಮ್ಮ ಪಕ್ಷಗಾರರ ವ್ಯವಹಾರದ ಮೇಲೆ ಬಂದಾಯಿಸಲಾರವು ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಎಲ್.ಎಸ್. ಪಾಟೀಲ, ವಕೀಲರು
ಹುಬ್ಬಳ್ಳಿ 06–08–2026 "ಓಂ ಸಾಯಿ ಅಪಾರ್ಟಮೆಂಟ್", ಕಿನ್ನಾಳ ಬಿಲ್ಡಿಂಗ್ ಹತ್ತಿರ, ವಿದ್ಯಾನಗರ, ಹುಬ್ಬಳ್ಳಿ ಮೊ : 8105810907

ಸಾರ್ವಜನಿಕ ನೋಟಿಸು

ನಮ್ಮ ಪಕ್ಷಗಾರರು ಕೊಟ್ಟ ಮಾಹಿತಿ ಮತ್ತು ಅಧಿಕಾರದ ಮೇಲಿಂದ ಕೊಡುವ ಸಾರ್ವಜನಿಕ ನೋಟೀಸು ಏನೆಂದರೆ,

ಧಾರವಾಡ ಜಿಲ್ಲಾ ಹುಬ್ಬಳ್ಳಿ ನಗರ ತಾಲೂಕ ಸರ್–ರಜಿಸ್ಟಾರ ಹದ್ದಿಯ ಪೈಕಿ ಹುಬ್ಬಳ್ಳಿ ತಾಲೂಕ ಗೋಪನಕೊಪ್ಪ ಗ್ರಾಮದಲ್ಲಿರುವ ವಿನಾಯಕ ಗಾರ್ಡನ್‌ದಲ್ಲಿ ನಿರ್ಮಿಸಿರುವ ಬಿನ್ ಶೇಡ್ಡಿ ವಾಸದ ಪ್ಲಾಟಿನ ಖುಲ್ಲಾ ಜಾಗಾ ಇದರ ರಿ.ಸರ್ವೆ. ನಂ–36/2ಅಬ/ಕ+ಡ/1+2 ಅದೆ. ಇದರಲ್ಲಿಯ ಪ್ಲಾಟ ನಂಬರ. 131 ಅದೆ. ಇದರ ಕ್ಷೇತ್ರ 01 ಗುಂಟೆ 07 ಆಣೆ ಅದೆ. ಇದನ್ನು ನಮ್ಮ ಪಕ್ಷಗಾರರು ಅದರ ಮಾಲಿಕರಾದ ಶ್ರೀ ಸಾಲ್ದಾದೂರ ಲೊಪಿಸ್ ತಂದೆ ಇಗ್‌ಟ್ ಲೊಪಿಸ್ ಇವರಿಂದ ಈಗ ಸದರ ಪ್ಲಾಟನ್ನು ಖರೀದಿ ದಸ್ತ ನೊಂದಣಿ ಮಾಡಿಸಿಕೊಳ್ಳುವವರಿದ್ದಾರೆ. ಸದರ ಖರೀದಿ ವ್ಯವಹಾರದ ಕುರಿತು ಸಾರ್ವಜನಿಕರದು ಯಾವುದೇ ರೀತಿಯ ಮತ್ತು ಯಾರದಾದರೂ ತಂಟೆ, ತಕರಾರು, ಹಕ್ಕು ಹಿತಾಸಕ್ತಿ, ಮಾಲ್ಕಿ ಭೋಜಾ ವಗೈರೆಗಳೇನಾದರೂ ಇದ್ದಲ್ಲಿ ಮತ್ತು ಕ್ಲೇಮ್ ವಗೈರೆ ಇದ್ದರೆ ಈ ನೋಟಿಸು ಪ್ರಕಟವಾದ 7 (ಏಳು) ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ದಾಖಲೆ ಸಮೇತ ಲೇಖಿ ಮುಖಾಂತರ ತಿಳಿಸತಕ್ಕದ್ದು. ಒಂದು ವೇಳೆ ನಿಗಧಿತ ಅವಧಿಯೊಳಗೆ ಯಾವುದೇ ತರಹದ ತಂಟೆ ತಕರಾರುಗಳು ಬಾರದೇ ಇದ್ದಲ್ಲಿ ಸದರಿ ಆಸ್ತಿಯ ಖರೀದಿ ದಸ್ತ ನೋಂದಣಿ ಮಾಡಿ ಕೊಳ್ಳುತ್ತಾರೆ. ತದನಂತರ ಬಂದ ಯಾವುದೇ ರೀತಿಯ ತಂಟೆ, ತಕರಾರುಗಳನ್ನು ಗಣನೆಗೆ ತೆಗೆದು ಕೊಳ್ಳುವದಿಲ್ಲ ಹಾಗೂ ನಮ್ಮ ಪಕ್ಷಗಾರರಿಗೆ ಬಂಧನಕಾರಿಯಾಗುವುದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಎಮ್.ಸಿ.ಸಂಗಪ್ಪನವರ, ವಕೀಲರು,
ಲಾ–ಚೇಂಬರ, ಎಸ್.ಪಿ. ಓನೆಕ್, 1ನೇ ಮಹಡಿ, ತಹಶೀಲ್ದಾರ ಆಫೀಸ್ ರೋಡ, ಧಾರವಾಡ
ಧಾರವಾಡ 06/08/2026 ಮೋ.ನಂ: 9900483150

ಸಾರ್ವಜನಿಕ ನೋಟೀಸು

ನಮ್ಮ ಪಕ್ಷಗಾರರು ಕೊಟ್ಟ ಮಾಹಿತಿ ವ ಅಧಿಕಾರದ ಮೇಲಿಂದ ಕೊಡುವ ಸಾರ್ವಜನಿಕ ನೋಟೀಸ ಏನೆಂದರೆ:–

ಧಾರವಾಡ ಜಿಲ್ಲಾ, ಧಾರವಾಡ ತಾಲೂಕು, ಸುತಗಟ್ಟಿ ಗ್ರಾಮದ ಸರ್ವೇ/ಬ್ಲಾಕ ನಂ: 9ಅ/8, ಪ್ಲಾಟ ನಂ:98 ಇದರ ಇ–ಸ್ವತ್ತಿನ ಸಂಖ್ಯೆ: 3183677182, ವಾರ್ಡ ನಂ: 23, ಸ್ವತ್ತಿನ ಹಳೆ ಸಂಖ್ಯೆ: 23/7318, ನಿರ್ದರಣಾ ಸಂಖ್ಯೆ: ಸರ್ವೇ ನಂ:9ಅ/8 ಪ್ಲಾಟ ನಂ:98, ನಿವೇಶನದ ಅಳತೆ: 09ಮೀ×15ಮೀ=135 ಚ.ಮೀ ಇದರ ಚಕಬಂದಿ: ಪೂರ್ವಕ್ಕೆ :ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ.79,80 ಉತ್ತರಕ್ಕೆ :ಪ್ಲಾಟ ನಂ:97, ದಕ್ಷಿಣಕ್ಕೆ: ಪ್ಲಾಟ ನಂ:99, ಸ್ವತ್ತಿನ ವಿಳಾಸ: ಸುತಗಟ್ಟಿ, ಕಾತಿ ಶಾಖಾ ಮಠದ ಹತ್ತಿರ, ಪಂಚಾಕ್ಷರಿ ನಗರ ರೋಡ, ನಿಲಗುಂಡಿ ಲೇಔಟ್, ನವನಗರ, ಹುಬ್ಬಳ್ಳಿ–580025 ಮೇಲ್ಕಂಡ ಆಸ್ತಿಯ ಮಾಲೀಕರಾದ ಶಿವಪ್ಪ ರಾಮಪ್ಪ ಸೊರಟೂರ, ಸಾ॥ ಅಂಕೋಲೆಕರ ರೋಡ, ಗಾಮನಗಟ್ಟಿ ರೋಡ, ಹುಬ್ಬಳ್ಳಿ–580025 ಇವರ ಕಡೆಯಿಂದ ನಮ್ಮ ಪಕ್ಷಗಾರರು ಖರೀದಿ ಪಡೆದು ಯಾರದಾದರೂ ಹಕ್ಕು ಹಿತಾಸಕ್ತಿ, ಹಿತಸಂಬಂದ, ತಂಟೆ, ತಕರಾರು, ಉತ್ತಾರಾಧಿಕಾರ, ಮಾಲ್ಕಿ, ಬ್ಯಾಂಕ್ ಭೋಜಾ, ಒಟ್ಟು ಮೋಕ್ತಿಯಾರ ಪತ್ರ ವಗೈರೆಗಳು ಇದ್ದರೆ, ಅಂಥವರು ಈ ನೋಟಿಸ್ ಪ್ರಕಟವಾದ ದಿನದಿಂದ 07 ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಲಿಖಿತ ದಾಖಲೆಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯೊಳಗೆ ಯಾವುದೇ ತರಹದ ತಂಟೆ ತಕರಾರುಗಳು ಬಾರದೇ ಇದ್ದಲ್ಲಿ ಸದರಿ ಆಸ್ತಿಯ ಖರೀದಿ ದಸ್ತ ನೋಂದಣಿ ಮಾಡಿ ಕೊಳ್ಳುತ್ತಾರೆ. ತದನಂತರ ಬಂದ ಯಾವುದೇ ರೀತಿಯ ತಂಟೆ, ತಕರಾರುಗಳನ್ನು ಗಣನೆಗೆ ತೆಗೆದು ಕೊಳ್ಳುವದಿಲ್ಲ ಹಾಗೂ ನಮ್ಮ ಪಕ್ಷಗಾರರಿಗೆ ಬಂಧನಕಾರಿಯಾಗುವುದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಸ್ಥಳ: ಹುಬ್ಬಳ್ಳಿ, ದಿನಾಂಕ: 06/08/2026
ಶ್ರೀ ಸಂತೋಷ. ಭೀ.ಬನ್ನಗೌಡ್ರ ವಕೀಲರು,
ನಂ.ಜ–40, ನೆಲಮಹಡಿ, ಬಾಲಾಜಿ ಹೈಟ್, ಎಸ್.ಬಿ.ಐ. ಬ್ಯಾಂಕ್ ಹಿಂದುಗಡೆ, ಶಾಂತಿನಗರ ರೋಡ, ಹುಬ್ಬಳ್ಳಿ, ಮೊ: 9886145533

ಶ್ರೀ ಸತ್ಯಾತ್ಮತೀರ್ಥರ ಭವ್ಯ ಸ್ವಾಗತಕ್ಕೆ ಸಿದ್ಧತೆ

ಶ್ರೀಗಳನ್ನು ಬರಮಾಡಿಕೊಳ್ಳಲು ಶೋಭಾಯಾತ್ರೆ ಇಂದು